# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 954 (1094) |
| 2) ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) ಉತ್ತರಿಸಬೇಕಾದ ದಿನಾಂಕ | : | 16.12.2025 |
| 4) ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ರೈಲ್ವೆ ಯೋಜನೆಗಳ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದ್ದಾಗ್ಯೂ, ರಾಜ್ಯವು ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸದಿರುವುದು ನಿಜವೇ; ಅದಕ್ಕೆ ಕಾರಣಗಳೇನು;</td><td rowspan="3">ಕರ್ನಾಟಕ ರಾಜ್ಯದಲ್ಲಿನ ರೈಲ್ವೆ ಜಾಲದ ಸಾಂದ್ರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಅನೇಕ ನೂತನ ರೈಲು ಮಾರ್ಗ ಯೋಜನೆಗಳಲ್ಲಿ ರಾಜ್ಯ ಸರ್ಕಾರವು ವೆಚ್ಚ ಹಂಚಿಕೆ ಮಾಡಿಕೊಳ್ಳುವುದರೊಂದಿಗೆ ಭೂಸ್ವಾಧೀನ ವೆಚ್ಚವನ್ನು ಭರಿಸುತ್ತಿದೆ. ಈ ಯೋಜನೆಗಳನ್ನು ರೈಲ್ವೆ ಇಲಾಖೆಯು ಕಾರ್ಯಗತಗೊಳಿಸುತ್ತಿದ್ದು, ಪ್ರಸ್ತುತ 9 ನೂತನ ರೈಲು ಮಾರ್ಗ ಯೋಜನೆಗಳು ಪ್ರಗತಿಯಲ್ಲಿವೆ.<br><br>ರಾಜ್ಯದೊಳಗಿನ ಈ ಕೆಳಕಂಡ 7 (Intra State) ನೂತನ ರೈಲು ಮಾರ್ಗ ಯೋಜನೆಗಳಿಗೆ ಉಚಿತವಾಗಿ ಭೂಮಿಯನ್ನು ನೀಡುವುದರೊಂದಿಗೆ ಕಾಮಗಾರಿ ವೆಚ್ಚದ ಶೇ. 50 ರಷ್ಟು ವೆಚ್ಚವನ್ನು ಭರಿಸಲು ಸಮ್ಮತಿ ನೀಡಲಾಗಿದೆ.
<table>
<tr><th>ಕ್ರ ಸಂ</th><th>ಯೋಜನೆ</th><th>ಶೇ. ಭೌತಿಕ ಪ್ರಗತಿ</th><th>ಶೇ. ಆರ್ಥಿಕ ಪ್ರಗತಿ</th></tr>
<tr><td>1.</td><td>ಗದಗ-ವಾಡಿ ನೂತನ ರೈಲು ಮಾರ್ಗ ಯೋಜನೆ</td><td>29%</td><td>48%</td></tr>
<tr><td>2.</td><td>ಬಾಗಲಕೋಟೆ-ಕುಡುಚಿ ನೂತನ ರೈಲು ಮಾರ್ಗ ಯೋಜನೆ</td><td>35%</td><td>32%</td></tr>
<tr><td>3.</td><td>ತುಮಕೂರು-ದಾವಣಗೆರೆ ನೂತನ ರೈಲು ಮಾರ್ಗ ಯೋಜನೆ</td><td>18%</td><td>24%</td></tr>
<tr><td>4.</td><td>ಶಿವಮೊಗ್ಗ-ರಾಣೆಬೆನ್ನೂರು ನೂತನ ರೈಲು ಮಾರ್ಗ ಯೋಜನೆ</td><td>11.5%</td><td>9.8%</td></tr>
<tr><td>5.</td><td>ಚಿಕ್ಕಮಗಳೂರು – ಬೇಲೂರು ನೂತನ ರೈಲು ಮಾರ್ಗ ಯೋಜನೆ</td><td>83%</td><td>80%</td></tr>
<tr><td>6.</td><td>ಬೇಲೂರು – ಹಾಸನ ನೂತನ ರೈಲು ಮಾರ್ಗ ಯೋಜನೆ</td><td>-</td><td>-</td></tr>
<tr><td>7.</td><td>ಧಾರವಾಡ – ಕಿತ್ತೂರು - ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ</td><td>-</td><td>-</td></tr>
</table>
ಮುಂದುವರೆದು, ಈ ಕೆಳಗಿನ ಅಂತರ ರಾಜ್ಯ (Inter State) 2 ನೂತನ ರೈಲು ಮಾರ್ಗ ಯೋಜನೆಗಳಿಗೆ ಭೂಸ್ವಾಧೀನ</td></tr>
<tr><td>(ಆ)</td><td>ರಾಜ್ಯದ ಬೇಡಿಕೆಗಳಿಗೆ ಸ್ಪಂದಿಸಲು ಕೇಂದ್ರ ಸರ್ಕಾರ ಉತ್ಸುಕವಾಗಿದ್ದರೂ ರಾಜ್ಯವು ನಿರಾಸಕ್ತಿ ತೋರಿಸಲು ಕಾರಣವೇನು;</td></tr>
<tr><td>(ಇ)</td><td>ಕೇಂದ್ರದೊಂದಿಗೆ ಕೂಡಲೇ ಪತ್ರ ವ್ಯವಹಾರ ನಡೆಸಿ ರೈಲ್ವೆ ಯೋಜನೆಗಳಿಗೆ ಅನುಮೋದನೆ ಪಡೆಯಲು ಮುಂದಾಗುವುದೇ?</td></tr>
</table>

ವೆಚ್ಚವೂ ಸೇರಿದಂತೆ ಯೋಜನಾ ವೆಚ್ಚದ ಶೇ.50 ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಲು ಸಮ್ಮತಿಯನ್ನು ನೀಡಲಾಗುತ್ತಿದೆ.

| ಕ್ರ ಸಂ | ಯೋಜನೆ | ಶೇ. ಭೌತಿಕ ಪ್ರಗತಿ | ಶೇ. ಆರ್ಥಿಕ ಪ್ರಗತಿ |
|---|---|---|---|
| 1. | ಗಿಣಿಗೇರಾ-ರಾಯಚೂರು ನೂತನ ರೈಲು ಮಾರ್ಗ ಯೋಜನೆ | 66% | 65% |
| 2. | ತುಮಕೂರು-ರಾಯದುರ್ಗ ನೂತನ ರೈಲು ಮಾರ್ಗ ಯೋಜನೆ | 70% | 68% |

ಪ್ರಸ್ತುತ, ರಾಜ್ಯ ಸರ್ಕಾರದಿಂದ ಮೇಲಿನ 9 ನೂತನ ರೈಲು ಮಾರ್ಗ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಯೋಜನಗಳಲ್ಲಿ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಹೊಣೆಗಾರಿಕೆಯನ್ನು ಸಹ ಹೊಂದಿದೆ. ಅಲ್ಲದೆ ಸದರಿ ಯೋಜನೆಗಳ ಅಂದಾಜು ವೆಚ್ಚ ರೂ.9192.24 ಕೋಟಿಗಳಿಂದ ರೂ.12146.98 ಗೆ ಏರಿಕೆಯಾಗಿದ್ದು (ರೂ.2945.74 ಕೋಟಿಗಳು ಏರಿಕೆ), ಅದರಂತೆ ರಾಜ್ಯ ಸರ್ಕಾರದ ಪಾಲು ರೂ.4792.87 ಕೋಟಿಗಳಿಂದ ರೂ.5757.27 ಕೋಟಿಗಳಿಗೆ ಏರಿಕೆಯಾಗಿರುತ್ತದೆ (ರೂ. 964.40 ಕೋಟಿಗಳ ಏರಿಕೆ).

ಇದರಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ನಿರ್ಮಾಣಕ್ಕಾಗಿ ಈವರೆಗೆ ರೂ.2581.67 ಕೋಟಿಗಳನ್ನು ರೈಲ್ವೆ ಇಲಾಖೆಗೆ ಬಿಡುಗಡೆ ಮಾಡಲಾಗಿದ್ದು, ಯೋಜನೆಗಳ ಭೂಸ್ವಾಧೀನಕ್ಕಾಗಿ ಅಗತ್ಯವಿರುವ ರೂ.2950.22 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲಾಡಳಿತ/ಕೆಐಎಡಿಬಿ ಗೆ ಬಿಡುಗಡೆ ಮಾಡಲಾಗಿದೆ.

ಆದ್ದರಿಂದ, ಪ್ರಸ್ತುತ ಪ್ರಗತಿಯಲ್ಲಿರುವ 9 ನೂತನ ರೈಲು ಮಾರ್ಗ ಯೋಜನೆಗಳ ಆರ್ಥಿಕ ಹೊಣೆಗಾರಿಕೆ ಹೆಚ್ಚಾಗಿರುವುದರಿಂದ ಸದರಿ ಯೋಜನೆಗಳನ್ನು ಪ್ರಥಮ ಆದ್ಯತೆಯಲ್ಲಿ ಪೂರ್ಣಗೊಳಿಸಲು ಪರಿಶೀಲಿಸಲಾಗುತ್ತಿದೆ.

**ಸಂಖ್ಯೆ: ಮೂಅಇ 340 ರಾರಾಹೆ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು